## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ ನಂಃ 54/2020

ಸಿಡಬ್ಲ್ಯೂಃ 10 ಪಿಡಬ್ಲ್ಯೂಃ 8

| | |
|---|---|
| ಹೆಸರುಃ | ಕೆ ಮಲ್ಲಿನಾಥ |
| ತಂದೆ/ಗಂಡನ ಹೆಸರುಃ | ನಿಂಗಣ್ಣ |
| ವಯಸ್ಸುಃ | 69 ವರ್ಷ |
| ಉದ್ಯೋಗಃ | ನಿವೃತ್ತ ತಹಶೀಲ್ದಾರ |
| ವಾಸಃ | ವಿಜಯಪುರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 20-08-2024 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ನಾನು ದಿಃ 30-09-2013 ರಿಂದ ದಿಃ 17-03-2014 ರ ವರೆಗೆ ನಾನು ಕಾರವಾರದಲ್ಲಿ ತಹಶೀಲ್ದಾರ ಎಂದು ಕರ್ತವ್ಯನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ಚಿತ್ತಾಕುಲ ಪೋಲೀಸರು ಕಾರವಾರ ತಾಲೂಕ ಚಿತ್ತಾಕುಲ ಗ್ರಾಮದ ಸರ್ವೆ ನಂ. 950/2 ಎ ಗೆ ಸಂಬಂದಪಟ್ಟಂತೆ ಪಹಣಿಪತ್ರವನ್ನು ಮತ್ತು ಮ್ಯೂಟೇಶನ್ ಎಂಟ್ರಿಯನ್ನು ಸದರಿ ಠಾಣೆಯ ಪ್ರಕರಣಕ್ಕೆ ಸಂದಬಪಟ್ಟಂತೆ ಪೂರೈಸಲು ವಿನಂತಿಸಿದ್ದು, ನಮ್ಮ ಕಚೇರಿಯ ಆಗಿನ ಶಿರಸ್ತೇದಾರರು ದಾಖಲೆಗಳನ್ನು ಚಿತ್ತಾಕುಲ ಪೋಲೀಸರಿಗೆ ಪ್ರಕರಣದ ತನಿಖೆಗೆ ನೀಡಿರುತ್ತಾರೆ. ಸದರಿ ಪೋಲೀಸರಿಗೆ ನೀಡಿದ ದಾಖಲೆಗಳನ್ನು ನೋಡಿದರೆ ನಾನು ಗುರುತಿಸಬಲ್ಲೆನು.

ಸಾಕ್ಷಿಯು ಸದರಿ ಮ್ಯೂಟೇಶನ್ ಎಂಟ್ರಿ, ಗಣಕೀಕೃತ ಪಹಣಿ ಪತ್ರ ಮತ್ತು ಕೈ ಬರಹ ಪಹಣಿ ಪತ್ರಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿ.ಪಿ-13 ರಿಂದ ನಿ.ಪಿ-17 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಂ ಎಂ ನ್ಯಾಯವಾದಿರವರಿಂದಃ**

ಪೋಲೀಸರು ಪಹಣಿ ಪತ್ರ ಮತ್ತು ಮ್ಯೂಟೇಶನ್ ಎಂಟ್ರಿ ದಾಖಲೆ ಕುರಿತು ಯಾವುದೇ ಮಾಹಿತಿಯನ್ನು ಕೋರಿ ವಿನಂತಿ ಪತ್ರವನ್ನು ನಮ್ಮ ಕಚೇರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಚೇರಿಯಿಂದ ಯಾವುದೇ ಪಹಣಿ ಪತ್ರ ಮತ್ತು ಮ್ಯೂಟೇಶನ್ ಎಂಟ್ರಿಗಳನ್ನು ಪೋಲೀಸರಿಗೆ ಈ ಪ್ರಕರಣದಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ-13 ರಲ್ಲಿ ದುರ್ಗಾಬಾಯಿ ದಿಗಂಬರ ಸೊಹನಿ ಎಂದು ನಮೂದು ಇರುತ್ತದೆ ಎಂದರೆ ಇರಬಹುದು. ನಿ.ಪಿ-15 ಮತ್ತು ನಿ.ಪಿ-17 ರಲ್ಲಿ ಸಹ ದುರ್ಗಾಬಾಯಿ ದಿಗಂಬರ ಸೊಹನಿ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಸದರಿ

ದಾಖಲೆಗಳನ್ನು ಕಚೇರಿಯಲ್ಲಿ ಲಭ್ಯವಿದ್ದ ಕಡತದ ಮೇರೆಗೆ ಹೇಳಿದ್ದು, ನಿಖರವಾಗಿ ನನಗೆ ಹೇಳಲು ಬರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ.**

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**C/c ಪ್ರ.ದ.ನ್ಯಾದಂ. ಕಾರವಾರ**